# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s TEPSOL Photovoltaic Power Ventures (P) Limited ಕಂಪನಿಗೆ ಕೊಪ್ಪಳ ಮತ್ತು ಗದಗ ಜಿಲ್ಲೆಗಳ ಯಲಬುರ್ಗ ಮತ್ತು ಗಜೇಂದ್ರಗಡ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 25 ಮೆ.ವ್ಯಾ. (13.2 ಮೆ.ವ್ಯಾ. ಪವನ + 11.8 ಮೆ.ವ್ಯಾ. ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಪಾರ್ಕ್‌ನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :** 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/TPPVPL - 25 MW (13.2 W + 11.8 S)/Gadag & Koppal/F-28/2023/0721, ದಿನಾಂಕ:03.03.2023.

2) ದಿನಾಂಕ:04.03.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡಾವಳಿ.

3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರ.ಸಂ. (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s TEPSOL Photovoltaic Power Ventures (P) Limited ಕಂಪನಿಗೆ ಕೊಪ್ಪಳ ಮತ್ತು ಗದಗ ಜಿಲ್ಲೆಗಳ ಯಲಬುರ್ಗ ಮತ್ತು ಗಜೇಂದ್ರಗಡ ತಾಲ್ಲೂಕುಗಳ ಗೌಡಗೇರಿ, ಬಲುಟಗಿ ಮತ್ತು ಗೋಗೇರಿ ಗ್ರಾಮಗಳಲ್ಲಿ 25 ಮೆ.ವ್ಯಾ. (13.2 ಮೆ.ವ್ಯಾ. ಪವನ + 11.8 ಮೆ.ವ್ಯಾ. ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಪಾರ್ಕ್ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್.ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆಗೆ/ಸಮೂಹ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 10 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, M/s TEPSOL Photovoltaic Power Ventures (P) Limited ಇವರು ಹಂಚಿಕೆಗಾಗಿ ಕೋರಿರುವ ಸ್ಥಳವು M/s Project Ten Renewable Power Private Limited ಕಂಪನಿಗೆ ಹಂಚಿಕೆಯಾಗಿದ್ದ 150 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಬರುತ್ತಿದ್ದು, ಸದರಿಯವರ 50 ವಿಂಡ್ ಟರ್ಬೈನ್‌ಗಳಿಗೆ ತೊಂದರೆಯಾಗದಂತೆ, M/s TEPSOL Photovoltaic Power Ventures (P) Limited ಕಂಪನಿಯವರು 04 WTGs ಅಳವಡಿಸುತ್ತಿರುವುದರಿಂದ, ಸದರಿಯವರು ಹಂಚಿಕೆಗೆ ಕೋರಿರುವ ಸ್ಥಳವು ಲಭ್ಯವಿರುತ್ತದೆ ಎಂದು ತಿಳಿಸಿರುತ್ತಾರೆ. M/s TEPSOL Photovoltaic Power Ventures (P) Limited ಕಂಪನಿಯವರು 13.2 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ 3.3 ಮೆ.ವ್ಯಾ. ಸಾಮರ್ಥ್ಯದ 4 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಪ್ರತಿ ವಿಂಡ್ ಟರ್ಬೈನ್‌ಗೆ 10 ಎಕರೆಯಂತೆ ಲೆಕ್ಕೀಕರಿಸಿ, ಒಟ್ಟು 40 ಎಕರೆ (4 Nos WTG X 10 Acres = 40 Acres) ಜಮೀನನ್ನು ಟೋಪೋಶೀಟ್ ಸಂಖ್ಯೆ:57 A/2 ರಲ್ಲಿ ಹಾಗೂ 11.8 ಮೆ.ವ್ಯಾ. ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಲು ಪ್ರತಿ ಮೆ.ವ್ಯಾ. ಸಾಮರ್ಥ್ಯಕ್ಕೆ 4 ಎಕರೆಯಂತೆ (11.8 MW X 4 Acres = 47.2 Acres) ಜಮೀನು ಒಟ್ಟು 87.2 ಎಕರೆ (40 Acres + 47 Acres=87.2 Acres) ಜಮೀನನ್ನು ಉಪಯೋಗಿಸಿಕೊಳ್ಳಬಹುದಾಗಿದೆ ಹಾಗೂ ಯೋಜನೆಗೆ ಬೇಕಾಗುವ ರಸ್ತೆ ಮತ್ತು Pooling Substation ಗೆ ಜಮೀನುಗಳನ್ನು ಅಗತ್ಯಕ್ಕೆ ತಕ್ಕಂತೆ ತೆಗೆದುಕೊಳ್ಳಬಹುದಾಗಿದೆ.

....2

M/s TEPSOL Photovoltaic Power Ventures (P) Limited ದಿನಾಂಕ:09.07.2018ರಂದು ನೋಂದಾವಣೆಗೊಂಡಿದ್ದು, ಇವರ ನೋಂದಾಯಿತ ಕಚೇರಿಯು ತೆಲಂಗಾಣದಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿ ಕಂಪನಿಯು M/s TEP Solar India Mauritius ಇವರಿಂದ ಸ್ಥಾಪಿತವಾದ SPV ಯಾಗಿದೆ. ಅಲ್ಲದೇ ಸದರಿ ಕಂಪನಿಯ ನೆಟ್‌ವರ್ತ್ ದಿನಾಂಕ:31.12.2021ರ ಅಂತ್ಯಕ್ಕೆ ರೂ.361.93 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

M/s TEPSOL Photovoltaic Power Ventures (P) Limited ಕಂಪನಿಯು ನವೀಕರಿಸಬಹುದಾದ ಇಂಧನ ನೀತಿ 2022-27ರಂತೆ 25 ಮೆ.ವ್ಯಾ. (13.2 ಮೆ.ವ್ಯಾ ಪವನ + 11.8 ಮೆ.ವ್ಯಾ. ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಪಾರ್ಕ್ ಯೋಜನೆಗೆ ಅರ್ಜಿ ಶುಲ್ಕ ಹಾಗೂ 30% ಸಂಸ್ಕರಣಾ ಶುಲ್ಕವನ್ನು ಪಾವತಿಸಿರುತ್ತಾರೆ. ಬಾಕಿ ಉಳಿದ 70% ಸಂಸ್ಕರಣಾ ಶುಲ್ಕವನ್ನು ಹಂಚಿಕೆ ಆದೇಶ ಹೊರಡಿಸಿದ ನಂತರ ಕೆ.ಆರ್.ಇ.ಡಿ.ಎಲ್. ನಿಯಮಿತದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪೂರ್ವದಲ್ಲಿ ಸಂದಾಯ ಮಾಡಬೇಕಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s TEPSOL Photovoltaic Power Ventures (P) Limited ಇವರು ಕೊಪ್ಪಳ ಮತ್ತು ಗದಗ ಜಿಲ್ಲೆಯ, ಯಲಬುರ್ಗ ಮತ್ತು ಗಜೇಂದ್ರಗಡ ತಾಲ್ಲೂಕುಗಳ, ವಿವಿಧ ಗ್ರಾಮಗಳಲ್ಲಿ State Grid ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 25 MW (13.2 ಮೆ.ವ್ಯಾ ಪವನ + 11.8 ಮೆ.ವ್ಯಾ ಸೌರ) ಸಾಮರ್ಥ್ಯದ ಹೈಬ್ರಿಡ್ (ಪವನ ಮತ್ತು ಸೌರ ಮಿಶ್ರಿತ) ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನಾಗಿರುತ್ತದೆ. ಸದರಿಯವರು ಅಳವಡಿಸುವ ವಿಂಡ್ ಟರ್ಬೈನ್ ಗಳಿಗೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಸದರಿಯವರು 4 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು (3300 ಕಿ.ವ್ಯಾ ಸಾಮರ್ಥ್ಯದ ಟರ್ಬೈನ್‌ಗಳು) ಅಳವಡಿಸಲು ಪ್ರತಿ ಟರ್ಬೈನ್‌ಗೆ 10 ಎಕರೆಯಂತೆ ಒಟ್ಟು 40 ಎಕರೆ (4 Nos of WTG x 10 Acres = 40 Acres) ಜಮೀನನ್ನು ಹಾಗೂ 11.8 ಮೆ.ವ್ಯಾ ಸಾಮರ್ಥ್ಯದ ಸೌರ ಫಲಕಗಳನ್ನು ಅಳವಡಿಸಲು ಪ್ರತಿ ಮೆ.ವ್ಯಾ ಸಾಮರ್ಥ್ಯಕ್ಕೆ 4 ಎಕರೆಯಂತೆ ಒಟ್ಟು 47.2 ಎಕರೆ (11.8 MW x 4 Acres = 47.2 Acres) ಜಮೀನು ಸೇರಿ ಒಟ್ಟು 87.2 ಎಕರೆ (40 Acre + 47.2 Acre = 87.2 Acres) ಜಮೀನನ್ನು ಟೋಪೋ ಶೀಟ್ ಸಂಖ್ಯೆ:57 A/2 ರಲ್ಲಿ ಉಪಯೋಗಿಸಿ ಕೊಳ್ಳಬಹುದಾಗಿದೆ ಹಾಗೂ ರಸ್ತೆ ಮತ್ತು Pooling Substation ನಿರ್ಮಾಣಕ್ಕಾಗಿ ಬೇಕಾಗುವ ಹೆಚ್ಚುವರಿ ಜಮೀನನ್ನು ಅಗತ್ಯಕ್ಕೆ ತಕ್ಕಂತೆ ಉಪಯೋಗಿಸಬಹುದಾಗಿದೆ.

ಸದರಿಯವರು 25 MW (13.2 ಮೆ.ವ್ಯಾ ಪವನ + 11.8 ಮೆ.ವ್ಯಾ ಸೌರ) ಹೈಬ್ರಿಡ್ ಪಾರ್ಕ್ ನಿಂದ ಉತ್ಪಾದಿಸುವ ವಿದ್ಯುತ್ತನ್ನು State Grid ವರ್ಗದಡಿಯಲ್ಲಿ KPTCL ನ 110/33 kV substation at Gajendragad ಇಲ್ಲಿಗೆ evacuate ಮಾಡುವುದಾಗಿ ತಿಳಿಸಿರುತ್ತಾರೆ.

ಮುಖ್ಯ ಇಂಜಿನಿಯರ್ (ಯೋಜನೆ ಮತ್ತು ಸಮನ್ವಯ), ಕೆಪಿಟಿಸಿಎಲ್ ಇವರು ಸದರಿ ಯೋಜನೆಗೆ 110/33 kV KPTCL substation at Gajendragad ಇಲ್ಲಿ evacuation ಲಭ್ಯತೆ ಇರುವುದಾಗಿ ತಿಳಿಸಿದರು. ಈ ಕೆಳಕಂಡ ಷರತ್ತುಗಳಿಗೊಳಪಟ್ಟು M/s TEPSOL Photovoltaic Power Ventures (P) Limited ಕಂಪನಿಗೆ 25 ಮೆ.ವ್ಯಾ. (13.2 ಮೆ.ವ್ಯಾ. ಪವನ + 11.8 ಮೆ.ವ್ಯಾ. ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಪಾರ್ಕ್‌ನ್ನು ಹಂಚಿಕೆ ನೀಡಲು ಸಮಿತಿಯು ಸರ್ವಾನುಮತಿಯಿಂದ ಶಿಫಾರಸ್ಸು ಮಾಡಿರುತ್ತದೆ.

i. ಸದರಿ RE ಪಾರ್ಕ್ (Wind-Solar Hybrid) ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಅಥವಾ ಹಂಚಿಕೆ ಸಾಮರ್ಥ್ಯವನ್ನು ಮೂರನೇ ವ್ಯಕ್ತಿಗೆ/ಸ್ವಂತ ಬಳಕೆ/ಸಮೂಹ ಸ್ವಂತ ಬಳಕೆಗೆ ವರ್ಗಾಯಿಸಲು InSTS ವರ್ಗದಡಿಯಲ್ಲಿ ಹಂಚಿಕೆ ಮಾಡಲು

....3